ಹೆಣಗಾಡುತ್ತಿದೆ. ಸ್ಥಳೀಯ ಜಲಸಂಪನ್ಮೂಲಗಳನ್ನು ನಿರ್ಲಕ್ಷಿಸಿ, ದೂರದ ನದಿಗಳಿಂದ ನೀರು ತರುವ ಅವೈಜ್ಞಾನಿಕ ಹಾಗೂ ಪರಿಸರ ವಿರೋಧಿ ಯೋಜನೆಗಳನ್ನು ರೂಪಿಸುವುದರಲ್ಲಿ ಸರ್ಕಾರಕ್ಕೆ ಇನ್ನಿಲ್ಲದ ಆಸಕ್ತಿ.

## ಎಲ್ಲರಿಗೂ ಬೇಕು ಪರಿಸರ ಪಾಠ

ಪರಿಸರ ಕಾಳಜಿ ಎನ್ನುವುದು ನಮ್ಮ ಪರಂಪರೆಯಲ್ಲೇ ಇದೆ. ಅದು ಜೀವನವಿಧಾನವೂ ಆಗಿದೆ. ಆದರೆ, ಜಾಗತೀಕರಣ ಸಂದರ್ಭದಲ್ಲಿ ಜೀವನದ ಗುರಿ ಮತ್ತು ಆ ಗುರಿಯನ್ನು ತಲುಪುವ ಮಾರ್ಗ ಎರಡೂ ನಮ್ಮ ಹಿರಿಯರಿಗಿಂತ ಭಿನ್ನವಾಗಿರುವುದರಿಂದ, ಪರಂಪರೆಯಿಂದ ನಮಗೆ ಸಹಜವಾಗಿ ದಕ್ಕಬೇಕಾಗಿದ್ದ ಜೀವನಪಾಠಗಳಿಂದ ಈಗ ದೂರವಾಗಿದ್ದೇವೆ. ಇಂಥ ಸಂದರ್ಭದಲ್ಲಿ ನಮಗುಳಿದಿರುವುದು ಒಂದೇ ದಾರಿ: ಪರಿಸರ ಪ್ರಜ್ಞೆಯನ್ನು ಪ್ರಜ್ಞಾಪೂರ್ವಕವಾಗಿ ಕಲಿಯುವುದು.

ಪರಿಸರ ಪ್ರಜ್ಞೆಯ ಪಾಠ ಎಲ್ಲ ವಯೋಮಾನದವರಿಗೂ ಅಗತ್ಯ. ಸಾಮಾನ್ಯವಾಗಿ, ಕಲಿಕೆಯೆನ್ನುವುದು ಮಕ್ಕಳಿಗೆ ಮೀಸಲು ಎಂದು ಭಾವಿಸುತ್ತೇವೆ. ಆದರೆ, ಪರಿಸರದ ಕಲಿಕೆ ದೊಡ್ಡವರಿಗೂ ಅಗತ್ಯವಾದುದು.

ಪರಿಸರ ಪ್ರಜ್ಞೆಯನ್ನು ನಮ್ಮ ಜೀವನದ ಭಾಗವಾಗಿಸಿಕೊಳ್ಳುವ ನಿಟ್ಟಿನಲ್ಲಿ ನಾವೆಲ್ಲ ಅನುಸರಿಸಬೇಕಾದ ಕೆಲವು ಸಂಗತಿಗಳನ್ನು ಕೆಳಕಂಡಂತೆ ಗುರ್ತಿಸಬಹುದು:

- ಪರಿಸರ ಕಾಳಜಿ ಮನೆಯಿಂದಲೇ ಶುರುವಾಗಬೇಕು. ಮನೆಯೇ ಮೊದಲ ಪಾಠಶಾಲೆ ಎನ್ನುವ ಮಾತು ಪರಿಸರ ಕಾಳಜಿಯನ್ನು ರೂಢಿಸಿಕೊಳ್ಳುವುದಕ್ಕೂ ಅನ್ವಯಿಸುವಂತಹದ್ದು.
- ಸರಳತೆಯನ್ನು ಮೈಗೂಡಿಸಿಕೊಳ್ಳುವುದು ಪರಿಸರ ಸಂರಕ್ಷಣೆಯ ಮೊದಲ ಹಂತ. ಬಹುತೇಕ ಸಂದರ್ಭಗಳಲ್ಲಿ ನಮ್ಮ ಸರಳತೆಗೂ ಅಭಾವ ವೈರಾಗ್ಯಕ್ಕೂ ಸಂಬಂಧವಿರುತ್ತದೆ. ಆರ್ಥಿಕವಾಗಿ ಸಬಲರಾಗಿರುವ ಸಂದರ್ಭದಲ್ಲೂ ಸರಳತೆ ನಮಗೆ ಸಾಧ್ಯವಾಗಬೇಕಾಗಿದೆ. ಸರಳತೆ ಎನ್ನುವುದು ಒಂದು ಮೌಲ್ಯ ಎನ್ನುವುದು ನಮ್ಮ ಜೀವನದ ನಂಬಿಕೆಯಾದಾಗ ಸುಸ್ಥಿರ ಪರಿಸರದೆಡೆಗೆ ಒಂದು ಮಹತ್ವದ ಹೆಜ್ಜೆಯಿಡುವುದು ಸಾಧ್ಯವಾಗುತ್ತದೆ.
- ಮನೆಯಲ್ಲಿ ಕಸ ಉತ್ಪಾದನೆಯನ್ನು ತಗ್ಗಿಸುವುದು ಪರಿಸರ ಸಂರಕ್ಷಣೆಯ ಪ್ರಾಥಮಿಕ ಪಾಠಗಳಲ್ಲಿ ಒಂದು. ಅನಗತ್ಯ ವಸ್ತುಗಳ ಸಂಗ್ರಹವನ್ನು ನಿಲ್ಲಿಸುವುದು ಕಸ ನಿಯಂತ್ರಣದಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ಉತ್ಪಾದಿಸಿದ ಕಸವನ್ನು ಹಿತ್ತಲಲ್ಲಿ ಗೊಬ್ಬರವಾಗಿ ರೂಪಿಸಿ ಗಿಡಗಳಿಗೆ ಬಳಸಲು ಪ್ರಯತ್ನಿಸಬಹುದು.
- ಪ್ಲಾಸ್ಟಿಕ್ ಬಳಕೆಯಿಂದ ದೂರವಿರುವುದು ವೈಯಕ್ತಿಕ ಆರೋಗ್ಯಕ್ಕೂ ಅನುಕೂಲ, ಪರಿಸರಕ್ಕೂ ಹಿತ. ಪ್ಲಾಸ್ಟಿಕ್‌ಗೆ ಪರ್ಯಾಯವಾಗಿ ಬಟ್ಟೆ, ಗಾಜು ಅಥವಾ ಮರದ ವಸ್ತುಗಳನ್ನು



ಪರ್ಯಾಯವಾಗಿ ಬಳಸುವುದು ಸಾಧ್ಯವಿದೆ. ಅನಿವಾರ್ಯ ಸಂದರ್ಭಗಳಲ್ಲಿ ಪ್ಲಾಸ್ಟಿಕ್ ಬಳಕೆ ಅನಿವಾರ್ಯವಾದರೂ, ಅದು ಮಣ್ಣು ಸೇರದಂತೆ ಎಚ್ಚರ ವಹಿಸಬೇಕು. ಪ್ಲಾಸ್ಟಿಕ್ ಮರು ಉತ್ಪಾದನೆ–ಬಳಕೆಯ ಯಾವ ಸಾಧ್ಯತೆಯನ್ನೂ ಬಿಟ್ಟುಕೊಡಬಾರದು.

- ಮನೆಯ ಹಿತ್ತಲಲ್ಲಿ, ಅಂಗಳದಲ್ಲಿ ಮರಗಿಡಗಳನ್ನು ಬೆಳೆಸುವುದರಿಂದ ಮನೆಯ ಶೋಭೆ ಹೆಚ್ಚುವುದರ ಜೊತೆಗೆ, ಮಯ್ಯಿ ಮನಸ್ಸಿನ ಉಲ್ಲಾಸವೂ ಹೆಚ್ಚುತ್ತದೆ. ಜಾಗ ಇಲ್ಲದ ಸಂದರ್ಭದಲ್ಲಿ ಕುಂಡಗಳಲ್ಲಿ ತಾರಸಿತೋಟವನ್ನು ರೂಪಿಸುವುದಕ್ಕೆ ಪ್ರಯತ್ನಿಸಬಹುದು.
- ಮನೆಯ ಮುಂದಿನ ರಸ್ತೆಯಲ್ಲಿ ಮರ ಗಿಡಗಳನ್ನು ಬೆಳೆಸುವುದಕ್ಕೆ ಅವಕಾಶವಿದ್ದರೆ, ಆ ಕೆಲಸದಲ್ಲಿ ತಪ್ಪದೆ ತೊಡಗಿಸಿಕೊಳ್ಳುವುದು. ಸಾರ್ವಜನಿಕ ಪ್ರದೇಶಗಳಲ್ಲಿ ಇರುವ ಮರ ಗಿಡಗಳನ್ನು ಸಲಹುವುದು.
- ಮನೆಯ ಸುತ್ತಮುತ್ತಲಿನ ಖಾಲಿ ಜಾಗವನ್ನು ಸಿಮೆಂಟಿನಿಂದ ಮುಚ್ಚುವ ಕೆಟ್ಟ ಅಭ್ಯಾಸವನ್ನು ಬಿಡುವುದು. ಸಾಧ್ಯವಾದ ಕಡೆಯಲ್ಲೆಲ್ಲ ಮಣ್ಣು ಉಸಿರಾಡಲಿಕ್ಕೆ ಅವಕಾಶ ಕಲ್ಪಿಸುವುದು ಒಳ್ಳೆಯದು.
- ಮನೆಯ ತಾರಸಿ ಮತ್ತು ಅಂಗಳದಲ್ಲಿ ಬೀಳುವ ಮಳೆ ನೀರನ್ನು ಇಂಗಿಸುವುದು ನಾವು ನಿರ್ವಹಿಸಲೇಬೇಕಾದ ನಾಗರಿಕ ಕರ್ತವ್ಯಗಳಲ್ಲೊಂದು. ಮಳೆ ನೀರನ್ನು ಸಂಗ್ರಹಿಸುವ ಬಳಸುವುದು ಕೂಡ ಜವಾಬ್ದಾರಿಯುತ ನಾಗರಿಕರ ಹೊಣೆಗಾರಿಕೆ.
- ಪರಿಸರ ಸಂರಕ್ಷಣೆಗಾಗಿ ಕಾರ್ಯ ನಿರ್ವಹಿಸುವ ಸಂಘಟನೆಗಳೊಂದಿಗೆ ಗುರ್ತಿಸಿಕೊಳ್ಳುವುದು ಹಾಗೂ ಅಂಥ ಸಂಘಟನೆಗಳಿಗೆ ನೆರವಾಗುವುದು.
- ಮಕ್ಕಳಿಗಾಗಿ ಉಳಿತಾಯ ಮಾಡುತ್ತೇವೆ. ಆಸ್ತಿಪಾಸ್ತಿ ಸಂಪಾದಿಸುತ್ತೇವೆ. ಆರೋಗ್ಯಕರ ಪರಿಸರ ರೂಪಿಸುವುದು ಕೂಡ ಮಕ್ಕಳಿಗೆ ಉಳಿಸಿಹೋಗುವ ನಿಧಿ ಎನ್ನುವುದನ್ನು ಸದಾ ನೆನಪಿನಲ್ಲಿಡುವುದು ಹಾಗೂ ಅದಕ್ಕೆ ತಕ್ಕಂತೆ ನಡೆದುಕೊಳ್ಳುವುದು.
- ಸ್ಥಳೀಯವಾಗಿ ಪರಿಸರ ಸಂರಕ್ಷಣೆಯ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡವರನ್ನು ಗುರ್ತಿಸಿ, ಗೌರವಿಸುವುದು.

## ಮಳೆಯ ದಿನಗಳಲ್ಲಿ ಅರಿವಿನ ಬಳ್ಳಿ

ಪರಿಸರ ಸಂರಕ್ಷಣೆಯ ಮಾದರಿಗಳಿಗಾಗಿ ನಾವು ಹುಡುಕಾಟ ನಡೆಸಬೇಕಾದ ಸ್ಥಿತಿಯೇನೂ ಇಲ್ಲ. ಅಂಥ ಮಾದರಿಗಳು ನಮ್ಮ ಸುತ್ತಮುತ್ತಲೇ ಸಾಕಷ್ಟಿವೆ. ಸಾಲುಮರದ ತಿಮ್ಮಕ್ಕನಂಥವರು ತಮ್ಮಷ್ಟಕ್ಕೆ ತಾವು ಮಾಡಿರುವ ಕೆಲಸ ಬಹು ದೊಡ್ಡದು, ನಮ್ಮೆಲ್ಲರಿಗೂ ಮಾದರಿಯದುದು. ಅಕ್ಷರ ತಿಳಿಯದಿದ್ದರೂ ಮರಗಿಡಗಳನ್ನು ನೆಡುವ ಮೂಲಕ, ಜಲಮೂಲಗಳನ್ನು ಸಂರಕ್ಷಿಸುವ ಮೂಲಕ ಸಮಾಜಕ್ಕೆ ವಿವೇಕದ ಬಿತ್ತಗಳಾಗಿ ಪರಿಣಮಿಸುವ ಸಾಧಕರು ನಮ್ಮ ನಡುವಿದ್ದಾರೆ. ಅಂಥ 'ದೊಡ್ಡವರ ದಾರಿ'ಯಲ್ಲಿ ಸ್ವಲ್ಪ ದೂರ ನಡೆಯುವುದು ಸಾಧ್ಯವಾದರೂ ಪ್ರಕೃತಿ ನಳನಳಿಸುವುದರಲ್ಲಿ ಅನುಮಾನವೇನೂ ಇಲ್ಲ.

ಕೊರೊನಾ ಸೋಂಕು ತೀವ್ರವಾಗಿದ್ದ